


ಚಿತ್ರ : ಪುರುಷೋತ್ತಮ ಕಾರಂತ

# ದೇವರು ಎಲ್ಲಿಲ್ಲ?

ಒಮ್ಮೆ ಗೋಸ್ವಾಮಿ ತುಲಸೀದಾಸರು ರಾತ್ರಿ ಬಹಳ ತಡವಾಗಿ ಮನೆಗೆ ಹಿಂದಿರುಗುತ್ತಿದ್ದರು. ದಾರಿಯಲ್ಲಿ ನಾಲ್ಕು ಜನ ಕಳ್ಳರು ಅವರಿಗೆ ಎದುರಾದರು. ಅವರು ತುಲಸೀದಾಸರನ್ನು, "ನೀನ್ಯಾರು" ಎಂದಾಗ "ನೀವು ಯಾರೋ ನಾನೂ ಅವನೇ" ಎಂಬ ಉತ್ತರ ಬಂತು. ಆಗ ಕಳ್ಳರು ಈತನೂ ತಮ್ಮ ಕಸುಬಿನವನೆಂದೇ ತಿಳಿದು, "ಸರಿ ಗೊತ್ತಾಯಿತು ಬಿಡು, ಹೊಸಬನಂತೆ ಕಾಣುತ್ತೀಯೆ. ನಮ್ಮ ಜೊತೆ ಸೇರಿಕೊ" ಎಂದರು.

ಕಳ್ಳರು ಒಂದು ಮನೆಗೆ ಕನ್ನ ಕೊರೆದು ತುಲಸೀದಾಸರನ್ನು ಕುರಿತು,"ಇಲ್ಲೇ ಹೊರಗೆ ನಿಂತಿರು. ಯಾರನ್ನಾದರೂ ನೋಡಿದೆ ಎಂದರೆ ನಮಗೆ ತಕ್ಷಣ ಸುಳಿವನ್ನು ಕೊಡು" ಎಂದರು. ಕಳ್ಳರು ಮನೆಯ ಒಳಕ್ಕೆ ನುಗ್ಗಿದರು. ಒಡನೆಯೇ ತುಲಸೀದಾಸರು ತಮ್ಮ ಜೋಳಿಗೆಯಿಂದ ಶಂಖವನ್ನು ಹೊರ ತೆಗೆದು ಗಟ್ಟಿಯಾಗಿ ಊದಲು ತೊಡಗಿದರು. ಕಳ್ಳರಿಗೆ ಶಬ್ದ ಕೇಳಿ ಹೆದರಿಕೆಯಾಯಿತು. ಗಡಿಬಿಡಿಯಿಂದ ಹೊರಗೆ ಬಂದು ತುಲಸೀದಾಸರ ಕೈಯಲ್ಲಿ ಶಂಖವಿರುವುದನ್ನು ನೋಡಿ ಕಳ್ಳರು ಅವರನ್ನು, "ಶಂಖವನ್ನು ಊದಿದ್ದೇಕೆ?" ಎಂದರು. ತುಲಸೀದಾಸರು ನುಡಿದರು : "ನೀವೇ ಹೇಳಿದ್ದಿರಿ, ಯಾರನ್ನಾದರೂ ನೋಡಿದರೆ ನಾನು ನಿಮಗೆ ಸುಳಿವನ್ನು ಕೊಡಬೇಕೆಂದು. ನಿಮ್ಮ ನಾಲ್ವರನ್ನೂ ಪ್ರಭು ರಾಮಚಂದ್ರನು ನೋಡುತ್ತಿರುವುದನ್ನು ಕಂಡೆ. ನನಗನ್ನಿಸಿತು, ನೀವು ಕಳ್ಳತನ ಮಾಡುತ್ತಿರುವುದನ್ನು ಅವನು ನೋಡಿದ್ದಾನೆ; ಕಳ್ಳತನ ಮಾಡುವುದು ಪಾಪ; ಖಂಡಿತ ಅವನು ನಿಮಗೆ ಶಿಕ್ಷೆ ವಿಧಿಸುತ್ತಾನೆ; ಆದ್ದರಿಂದ ನಿಮ್ಮನ್ನು ಎಚ್ಚರಿಸುವುದು ಒಳ್ಳೆಯದು ಎಂದು."

"ಅದು ಸರಿ, ನಿನಗೆ ರಾಮಚಂದ್ರ ಪ್ರಭು ಎಲ್ಲಿ ಕಾಣಿಸಿಕೊಂಡ?" ಒಬ್ಬ ಕಳ್ಳ ಕೇಳಿದ. "ಪರಮಾತ್ಮ ಎಲ್ಲಿ ವಾಸವಾಗಿಲ್ಲ? ಅವನು ಸರ್ವಜ್ಞ, ಅವನು ಅಂತರ್ಯಾಮಿ, ಈ ಜಗತ್ತಿನಲ್ಲಿ ಎಲ್ಲೆಲ್ಲೂ ದೇವರು ವಿರಾಜಮಾನವಾಗಿರುವುದು ನನಗೆ ಕಾಣುತ್ತಿರುವುದು " ಎಂದು ತುಲಸೀದಾಸರು ಉತ್ತರಿಸಿದರು.

ಕಳ್ಳರಿಗೆ ತಕ್ಷಣವೆ ಶ್ರದ್ಧಾ ಭಕ್ತಿಗಳು ಮೂಡಿ, ಅವರು ತುಲಸೀದಾಸರ ಪಾದಗಳಿಗೆರಗಿದರು. ಕಳ್ಳತನದ ಕಸುಬನ್ನು ಬಿಟ್ಟು, ಅವರ ಶಿಷ್ಯರಾದರು. ◆